| ELIGIBILITY CLAUSES | CODES |
|---|---|
| The candidate should have studied and passed in one or more Government or Government recognised educational institutions located in the State of Karnataka for a minimum period of SEVEN academic years commencing from 1st standard to 2nd PUC / 12th standard as on 1st July of the year in which the Entrance Test is held and must have appeared and passed either SSLC / 10th standard or 2nd PUC / 12th standard examination from Karnataka State. In case of the candidate who had taken more than one year to pass a class or standard, the years of academic study is counted as one year only.<br>**Documents to be produced**:<br>1) SSLC / 10th standard Marks Card,<br>2) 2nd PUC / 12th standard Marks Card of the candidate,<br>3) Candidate's Study Certificate;<br>4) If claiming Rural quota: - Rural Study Certificate from 1st to 10th std for Ten Complete Years.<br>5) If claiming Kannada Medium quota: Kannada Medium Study Certificate from 1st to 10th std for Ten Complete Years;.<br>6) If claiming reservation benefits: Caste / Caste Income Certificate issued by Concerned Tahasildar- For SC / ST in Form-D, Category-I in form E and 2A, 2B, 3A and 3B in Form F. | **a** |
| The candidate should have studied and passed either 1st and 2nd year Pre-University Examination or 11th and 12th standard examination within the State of Karnataka from an Educational Institution run or recognized by the State Government and that either of the parents should have studied in Karnataka for a minimum period of SEVEN years.<br>**Documents to be produced:**<br>1) SSLC / 10th standard Marks Card,<br>2) 2nd PUC / 12th standard Marks Card of the candidate;<br>3) If claiming reservation benefits:- Caste / Caste Income Certificate issued by Tahsildar- For SC / ST in Form-D, Category-I in Form-E and 2A, 2B, 3A and 3B in Form-F., along with –<br>4) (a) a study certificate for either of the parent having studied for at least 7 years in Karnataka from the Head of the educational institution where he / she had studied.<br>(b) the candidate's study certificate for having studied both 1st & 2nd PUC or 11th & 12th standard in Karnataka issued by the head of the educational institution. | **b** |
| The candidate and either of the parent's mother tongue should be Kannada, Tulu or Kodava and either of parent was domiciled in the state of Karnataka, such candidate should have passed the qualifying examination from a University or Board or any other Institution located outside Karnataka and should be residing outside the State of Karnataka as on 1st May of 2016. Provided that the candidate shall undergo a Kannada Language test conducted by KEA.<br>**Documents to be produced** :<br>1) SSLC / 10th standard Marks Card<br>2) 12th standard Marks Card of the candidate along with –<br>3) a domicile certificate issued by the concerned Revenue or Municipal Authorities certifying that the candidate and his either of parent have resided outside the state of Karnataka as on 01-05-2016. The place of the Issuing authority should correspond to the place of domicile of the candidate / father / mother.<br>4) a domicile certificate issued by concerned Revenue Authorities of the state of Karnataka regarding the previous domicile of the father / mother of the candidate as a place in the state of Karnataka. The place of the Issuing authority should correspond to the place of domicile of the father / mother.<br>5) Candidate's Study certificate, Transfer Certificate.<br>6) Father / Mother 10th standard marks card / cumulative record in original in support of mother tongue as Kannada / Tulu / Kodava.<br>7) A duly sworn declaration regarding mother tongue of the candidates. | **c** |

| | |
|---|---|
| A candidate whose mother tongue is Kannada, Tulu or Kodava should have resided and studied for a period of SEVEN YEARS between 1st and 12th standards in disputed Kannada speaking area of South Sholapur or Akkalkot or Jath or Gadhinglaj Taluks of Maharashtra State or Kasargod or Hosadurga Taluks of Kerala State. Provided that the candidate shall undergo a Kannada Language test conducted by KEA. | **d** |
| **Documents to be produced** :<br>1) SSLC / 10th standard Marks Card and 2nd PUC / 12th standard Marks Card of the candidate along with –<br>2) Residential certificate from the concerned Tahsildar of the respective disputed Taluk.<br>3) Candidate's study certificate issued by the head of institution, which should be countersigned by Taluk Education Officer.<br>4) A duly sworn declaration regarding mother tongue of the candidate. | |
| **NOTE:** The candidates claiming eligibility under Clauses 'c' and 'd' above, should invariably speak, read and write Kannada and must secure a minimum of 12 marks in Kannada Language Test to be conducted by KEA on 06-05-2016. Otherwise, they will not be assigned ranks. | |

| | |
|---|---|
| In the case of a candidate who is son or daughter of defence personnel who has worked continuously in Karnataka for a minimum period of one year in Karnataka during the Two year period of study of candidates in PUC / 11th and 12th Standard course. The candidate should have studied and passed the qualifying examination from any Government or Government recognised educational institution located in the State of Karnataka. | **e** |
| **Documents to be produced :**<br>1) SSLC / 10th standard Marks Card<br>2) 2nd PUC / 12th standard Marks Card of the candidate along with –<br>3) The candidate's study certificate for having studied 2nd PUC or equivalent examination in Karnataka issued by the head of the educational institution.<br>4) Employment certificate of the parent issued by the Controlling Office where the parent is working indicating the period during which he has worked in the State of Karnataka i.e., from the reporting date to till date. | |

| | |
|---|---|
| Son or daughter of serving Defence personnel from Karnataka who at the time of joining the Defence service had declared his / her hometown a place in the State of Karnataka. Proof of such domicile should be obtained and produced by obtaining the extract from the AG'S branch (Army Hqs) **respective branch of integrated HQ of MoD for Officers and respective Record Offices for JCOs / OR**. Further, the candidate should have passed the Q. E. from a University or Board or any other institution located anywhere in India. | **f** |
| **Documents to be produced:**<br>1) SSLC / 10th standard Marks Card<br>2) 2nd PUC / 12th standard Marks Card of the candidate;<br>3) If claiming reservation benefits:- Caste / Caste Income Certificate issued by Concerned Tahsildar as per the prescribed format given in the brochure along with<br>4) Parent's home town declaration certificate while joining the service issued by **respective branch of integrated HQ of MoD for Officers and respective Record Offices for JCOs / OR**. | |

| | |
|---|---|
| In the case of a candidate who is a son or daughter of a defence personnel who had served in Karnataka for at least one year and is posted on duty in Field / Active Service and whose family is permitted by Defence Authorities to continue to stay in Karnataka. Such candidate should have studied and passed the qualifying examination from any Government or Government recognised educational institution located in Karnataka. | **g** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate along with –<br>3) The candidate's study certificate for having studied 2nd PUC or equivalent examination in Karnataka issued by the head of the educational institution. | |

| | |
|---|---|
| 4) Service certificate of the parent issued by the Controlling Office indicating the period during which the parent has worked in Karnataka and a certificate showing the present place of posting, indicating that his family is permitted to stay in Karnataka. The present working place of the parent should be indicated in NAME and not by CODE NUMBERS. | |

| | |
|---|---|
| Son or daughter of an ex-servicemen who at the time of joining the defence service had declared a place in Karnataka as his home town, proof of such domicile should be obtained and produced from the "Deputy Director, Department of Sainik Welfare and Resettlement" of that District and the same should countersigned by the Director Department of Sainik Welfare and Resettlement. Further, the candidate should have passed the Q. E. from a University or Board or any other institution located anywhere in India. | **h** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate;<br>3) If claiming reservation benefits :- Caste / Caste Income Certificate issued by Concerned Tahsildar- For SC / ST in Form-D, Category-I in Form-E and 2A, 2B, 3A and 3B in Form-F<br>4) Parent's home town declaration certificate while joining the service issued by the Joint Director / Deputy Director of the concerned district and countersigned by the Director, Department of Sainik Welfare and Resettlement, Bangalore. | |

| | |
|---|---|
| In the case of a candidate being a son or daughter of an employee of the Union Government or an employee of the Union or Karnataka State Government Undertaking or Joint Sector Undertaking, who is liable to be transferred anywhere in India as per the terms and conditions of his employment and has worked in Karnataka for a minimum period of one year in Karnataka during the Two year period of study of candidates in PUC / 11th and 12th Standard course. and such candidate has studied and passed the qualifying examination from any Government or Government recognised educational institution located in the State of Karnataka | **i** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate along with<br>3) The candidate's study certificate for having studied 2nd PUC or equivalent examination in Karnataka issued by the head of the educational institution.<br>4) A certificate from the employer indicating the parent's period of employment in the State of Karnataka and also showing that he is transferable anywhere in India.<br>5) A certificate from employer indicating parent as an employee of Union Government or an employee of the Union or Karnataka State Government Undertaking or Joint Sector Undertaking. | |

| | |
|---|---|
| Son or daughter of a working or retired employee of the Union Government or employee of Union or Karnataka State Government undertaking or Joint Sector undertaking where such employee; (a) had declared to the employer at the time of joining service any place in Karnataka to be his home town; and (b) had studied in any Government or Government recognised educational institution or institutions located in Karnataka for a minimum period of seven years; and was or is liable to be transferred anywhere in India as per the terms and conditions of his employment. Further, the candidate should have passed the Q. E. from a University or Board or any other institution located anywhere in India. | **j** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate;<br>3) If claiming reservation benefits:- Caste / Caste Income Certificate issued by Concerned Tahsildar- For SC / ST in Form-D, Category-I in Form-E and 2A, 2B, 3A and 3B in Form-F Along with – (1) a study certificate of the parent employee for having studied for at least 7 years in the State of Karnataka from the Head of the educational institution where he / she had studied. (2) home town declaration certificate of the parent employee while joining the service and showing that he is transferable anywhere in India issued by the employer. | |

| | |
|---|---|
| Son or daughter of Members of Parliament elected from Karnataka. Further, the candidate should have passed the Q. E. from a University or Board or any other institution located anywhere in India. | **k** |
| **Documents to be produced**:<br>1) SSLC / 10th standard Marks Card<br>2) 2nd PUC / 12th standard Marks Card of the candidate;<br>3) If claiming reservation benefits :- Caste / Caste Income Certificate issued by Concerned Tahsildar- For SC / ST in Form-D, Category-I in form-E and 2A, 2B, 3A and 3B in Form-F.<br>4) Certificate showing that the parent is / was a Member of Parliament elected from Karnataka issued by the Parliament Secretariat. | |

| | |
|---|---|
| Son or daughter of serving or retired employee:(a) belonging to All India Service of Karnataka cadre; and (b) of the Karnataka State Government, who has served or is serving outside the State of Karnataka during the period corresponding to Candidate's study outside the State from 1st standard to 2nd PUC or 12th standard examination can be added to make up the seven years study within Karnataka as required under clause (a) above. | **l** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate ;<br>3) If claiming reservation benefits :- Caste / Caste Income Certificate issued by Concerned Tahsildar- For SC / ST in Form-D, Category-I in Form-E and 2A, 2B, 3A and 3B in Form-F, along with –<br>4) Certificate from the Principal Secretary / Deputy Secretary / Under Secretary, DPAR, Government of Karnataka, Bangalore where the parent belongs to All India Service of Karnataka cadre stating that the parent is a member of such All India Cadre. The certificate should also indicate the period during which he has served or is serving outside the state of Karnataka and if the parent is a State Government Employee, a certificate from the concerned Head of the Department or the Head of the Office where such parent is employed should be produced in this regard. | |

| | |
|---|---|
| Son or daughter of Jammu & Kashmiri migrants, proof of such migration (IDENTITY CARD) should be obtained and produced from the jurisdictional "District Magistrate and Deputy Commissioner" of any state in India. | **m** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate along with<br>3) An original certificate (IDENTITY CARD) issued by the Jurisdictional District Magistrate and Deputy Commissioner of any state in India, as the proof of migration. **The candidates who are claiming eligibility under clause 'm' are eligible only for the seats earmarked by the Government.** | |

| | |
|---|---|
| The candidates who have studied TEN full academic years in Kannada Medium from 1st standard to 10th standard in places outside the state of Karnataka. Such candidates need not appear for Kannada Language Test conducted by KEA. Provided the candidate should have studied and passed the qualifying examination from any Government or Government recognised educational institution. | **n** |
| **Documents to be produced** :<br>1) SSLC / 10th standard Marks Card<br>2) 2nd PUC / 12th standard Marks Card of the candidate along with –<br>3) A domicile certificate issued by the concerned Revenue or Municipal Authorities certifying that the candidate and his father / mother have resided outside the state of Karnataka as on 01-05-2016. The place of the Issuing authority should correspond to the place of domicile of the candidate / father / mother.<br>4) Candidate's Study certificate, for having studied in Kannada Medium from 1st standard to 10th standard issued by the head of the institution. | |

| | |
|---|---|
| Son / Daughter of working or Retired employee in Central Armed Police Force service, who at the time of joining the CAPF service (Central Armed Police Force) had declared the hometown as a place in the State of Karnataka, proof of such domicile having been produced by obtaining the extract from the Record Office of the CAPF Unit where the Parent's service record are maintained. Further, the candidate should have passed the Q. E. from a University or Board or any other institution located anywhere in India. | **O** |
| **Documents to be produced**:<br>1) SSLC / 10th standard Marks Card<br>2) 2nd PUC / 12th standard Marks Card of the candidate;<br>3) If claiming reservation benefits:- Caste / Caste Income Certificate issued by Concerned Tahsildar as per the prescribed format given in the brochure; along with<br>4) Parent's home town declaration certificate while joining the service issued by Record Office of the CAPF unit, where the parents service records are maintained. | |

**NOTE**: In case, if any of the documents produced in respect of the Clause claimed by the candidate is found to be false / incorrect, the seat allotted to the candidate will be cancelled at any stage and the entire fee amount paid by such candidate will be forfeited.

<table>
<tr><th>ಅರ್ಹತಾ ಖಂಡಗಳು ಮತ್ತು ಅಗತ್ಯವಿರುವ ದಾಖಲೆಗಳು</th><th>ಸಂಕೇತಾಕ್ಷರಗಳು</th></tr>
<tr><td>ವಿದ್ಯಾರ್ಥಿಯು, ಯಾವ ವರ್ಷದಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದೋ ಆ ವರ್ಷದ ಜುಲೈ 1ನೇ ದಿನಾಂಕದಂದು, 1ನೇ ತರಗತಿಯಿಂದ ಪ್ರಾರಂಭವಾಗಿ ದ್ವಿತೀಯ ಪಿಯುಸಿ/ 12ನೇ ತರಗತಿಯವರೆಗೆ ಕನಿಷ್ಠ ಏಳು ಶೈಕ್ಷಣಿಕ ವರ್ಷಗಳ ಅವಧಿಯನ್ನು, ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದ ಒಂದು ಅಥವಾ ಹೆಚ್ಚಿನ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರಬೇಕು ಮತ್ತು ತೇರ್ಗಡೆಯಾಗಿರಬೇಕು ಹಾಗೂ ಎಸ್‌ಎಸ್‌ಎಲ್‌ಸಿ/ 10ನೇ ತರಗತಿ ಅಥವಾ ದ್ವಿತೀಯ ಪಿಯುಸಿ/ 12ನೇ ತರಗತಿಯ ಪರೀಕ್ಷೆಯನ್ನು ಕರ್ನಾಟಕ ರಾಜ್ಯದಲ್ಲಿ ಬರೆದಿರಬೇಕು ಹಾಗೂ ಅದರಲ್ಲಿ ತೇರ್ಗಡೆಯಾಗಿರಬೇಕು. ವಿದ್ಯಾರ್ಥಿಯು, ಒಂದು ತರಗತಿ ಅಥವಾ ವರ್ಗವನ್ನು ತೇರ್ಗಡೆಯಾಗುವುದಕ್ಕೆ ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದರೆ, ಆಗ ವ್ಯಾಸಂಗ ಮಾಡಿರುವ ವರ್ಷಗಳನ್ನು ಒಂದೇ ವರ್ಷವೆಂದು ಲೆಕ್ಕಹಾಕಲಾಗುವುದು.</td><td rowspan="2">a</td></tr>
<tr><td>ಹಾಜರುಪಡಿಸಬೇಕಾದ ದಾಖಲೆಗಳು:<br>1) ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ/ 10ನೇ ತರಗತಿಯ ಅಂಕ ಪಟ್ಟಿ,<br>2) ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ;<br>3) ವಿದ್ಯಾರ್ಥಿಯ ವ್ಯಾಸಂಗ ಪ್ರಮಾಣಪತ್ರ;<br>4) ಗ್ರಾಮೀಣ ಕೋಟಾ ಕೋರಿರುವ ಪಕ್ಷದಲ್ಲಿ:– 1ನೇ ತರಗತಿಯಿಂದ 10ನೇ ತರಗತಿಯವರೆಗೆ ಹತ್ತು ಪೂರ್ಣ ವರ್ಷಗಳನ್ನು ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಿಸಿದ ಪ್ರಮಾಣಪತ್ರ;<br>5) ಕನ್ನಡ ಮಾಧ್ಯಮ ಕೋಟಾ ಕೋರುವುದಿದ್ದ ಪಕ್ಷದಲ್ಲಿ:– 1ನೇ ತರಗತಿಯಿಂದ 10ನೇ ತರಗತಿವರೆಗೆ ಹತ್ತು ಪೂರ್ಣ ವರ್ಷಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಿಸಿದ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣಪತ್ರ;<br>6) ಮೀಸಲಾತಿ ಪ್ರಯೋಜನಗಳನ್ನು ಕೋರಿರುವುದಿದ್ದ ಪಕ್ಷದಲ್ಲಿ:– ಸಂಬಂಧಪಟ್ಟ ತಹಸೀಲ್ದಾರ್‌ರವರು ಪ.ಜಾ/ ಪ.ಪಂ.ಗಳಿಗೆ ನಮೂನೆ–ಡಿನಲ್ಲಿ, ಪ್ರವರ್ಗ–1ಕ್ಕೆ ನಮೂನೆ–ಇ ನಲ್ಲಿ ಹಾಗೂ 2ಎ, 2ಬಿ, 3ಎ ಮತ್ತು 3ಬಿಗೆ ನಮೂನೆ–ಎಫ್‌ನಲ್ಲಿ ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ.</td></tr>
<tr><td>ವಿದ್ಯಾರ್ಥಿಯು, ರಾಜ್ಯ ಸರ್ಕಾರ ನಡೆಸುವ ಅಥವಾ ಅದರಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ಪದವಿ ಪೂರ್ವ ಶಿಕ್ಷಣವನ್ನು ಅಥವಾ 11ನೇ ಮತ್ತು 12ನೇ ತರಗತಿಯ ಶಿಕ್ಷಣವನ್ನು ವ್ಯಾಸಂಗ ಮಾಡಿ ತೇರ್ಗಡೆಯಾಗಿರಬೇಕು ಹಾಗೂ ವಿದ್ಯಾರ್ಥಿಯ ತಂದೆ–ತಾಯಿ ಇಬ್ಬರಲ್ಲಿ ಒಬ್ಬರು ಕನಿಷ್ಠ ಏಳು ವರ್ಷಗಳ ಅವಧಿಯವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರಬೇಕು.</td><td rowspan="2">b</td></tr>
<tr><td>ಹಾಜರುಪಡಿಸಬೇಕಾದ ದಾಖಲೆಗಳು:<br>1) ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ:<br>2) ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ;<br>3) ಮೀಸಲಾತಿ ಪ್ರಯೋಜನಗಳನ್ನು ಕೋರುವುದಿದ್ದ ಪಕ್ಷದಲ್ಲಿ:– ಸಂಬಂಧಪಟ್ಟ ತಹಸೀಲ್ದಾರ್‌ರವರು ಪ.ಜಾ/ಪ.ಪಂ.ದವರಿಗೆ ನಮೂನೆ–ಡಿನಲ್ಲಿ, ಪ್ರವರ್ಗ–1ಕ್ಕೆ ನಮೂನೆ–ಇನಲ್ಲಿ ಮತ್ತು 2ಎ, 2ಬಿ, 3ಎ ಹಾಗೂ 3ಬಿ ಪ್ರವರ್ಗಗಳಿಗೆ ನಮೂನೆ–ಎಫ್‌ನಲ್ಲಿ ನೀಡಿರುವ ಜಾತಿ/ ಜಾತಿ ಆದಾಯ ಪ್ರಮಾಣಪತ್ರ, ಇದರ ಜೊತೆಗೆ, –<br>4) (ಎ) ವಿದ್ಯಾರ್ಥಿಯ ತಂದೆ ಅಥವಾ ತಾಯಿ, ಇಬ್ಬರಲ್ಲಿ ಒಬ್ಬರು ಕರ್ನಾಟಕದಲ್ಲಿ ಕನಿಷ್ಠ 7 ವರ್ಷಗಳವರೆಗೆ ವ್ಯಾಸಂಗ ಮಾಡಿರುವ ಬಗ್ಗೆ, ಆತ/ ಆಕೆ ಯಾವ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ್ದರೋ ಆ ಶಿಕ್ಷಣ ಸಂಸ್ಥೆಯ ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರು ನೀಡಿರುವ ವ್ಯಾಸಂಗ ಪ್ರಮಾಣಪತ್ರ;<br><br>(ಬಿ) ವಿದ್ಯಾರ್ಥಿಯು, ಪ್ರಥಮ ಮತ್ತು ದ್ವಿತೀಯ ಪಿಯುಸಿ ಎರಡನ್ನು ಅಥವಾ 11ನೇ ಮತ್ತು 12ನೇ ತರಗತಿ ಎರಡನ್ನು ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು ನೀಡಿರುವ ವಿದ್ಯಾರ್ಥಿಯ ವ್ಯಾಸಂಗ ಪ್ರಮಾಣಪತ್ರ;</td></tr>
<tr><td>ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ತಂದೆ–ತಾಯಿ ಇಬ್ಬರಲ್ಲಿ ಒಬ್ಬರ ಮಾತೃಭಾಷೆಯು ಕನ್ನಡ, ತುಳು ಅಥವಾ ಕೊಡವ ಭಾಷೆಯಾಗಿರುವ ಮತ್ತು ತಂದೆ–ತಾಯಿ ಇಬ್ಬರಲ್ಲಿ ಒಬ್ಬರು ಹಿಂದೆ ಕರ್ನಾಟಕದ ನಿವಾಸಿಗಳಾಗಿದ್ದ ಪಕ್ಷದಲ್ಲಿ ವಿದ್ಯಾರ್ಥಿಯು, ಕರ್ನಾಟಕದ ಹೊರಗೆ ಇರುವ ವಿಶ್ವವಿದ್ಯಾಲಯ ಅಥವಾ ಮಂಡಳಿ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಿಂದ ನಡೆಸಲಾಗುವ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ 1ನೇ ಮೇ 2016ರಂದು ಕರ್ನಾಟಕ ರಾಜ್ಯದಿಂದ ಹೊರಗೆ ವಾಸಿಸುತ್ತಿರಬೇಕು. ಅಲ್ಲದೆ ಅಂಥ ವಿದ್ಯಾರ್ಥಿಯು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾಗುತ್ತದೆ.</td><td>c</td></tr>
</table>

**ಹಾಜರುಪಡಿಸಬೇಕಾದ ದಾಖಲೆಗಳು:**

1) ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ/ 10ನೇ ತರಗತಿಯ ಅಂಕಪಟ್ಟಿ;
2) 12ನೇ ತರಗತಿಯ ಅಂಕಪಟ್ಟಿ ಮತ್ತು ಇದರ ಜೊತೆಗೆ,–
3) ವಿದ್ಯಾರ್ಥಿ/ನಿ ಮತ್ತು ಆತನ/ ಆಕೆಯ ತಂದೆ–ತಾಯಿ ಇಬ್ಬರಲ್ಲಿ ಒಬ್ಬರು, 01–05–2016ರಂದು ಕರ್ನಾಟಕ ರಾಜ್ಯದಿಂದ ಹೊರಗೆ ವಾಸಿಸುತ್ತಿದ್ದರು ಎನ್ನುವುದನ್ನು ಪ್ರಮಾಣೀಕರಿಸಿ ಸಂಬಂಧಪಟ್ಟ ಕಂದಾಯ ಅಥವಾ ಪೌರಸಭಾ ಪ್ರಾಧಿಕಾರಿಗಳು ನೀಡಿರುವ ವಾಸದ ಪ್ರಮಾಣಪತ್ರ. ಈ ಪ್ರಮಾಣಪತ್ರ ನೀಡುವ ಪ್ರಾಧಿಕಾರಿಗಳ ಸ್ಥಳವು, ವಿದ್ಯಾರ್ಥಿ/ನಿಯ, ಆತನ/ಆಕೆಯ ತಂದೆ/ ತಾಯಿಯ ವಾಸದ ಸ್ಥಳವಾಗಿರಬೇಕು.
4) ವಿದ್ಯಾರ್ಥಿ/ನಿಯ ತಂದೆ/ ತಾಯಿಯ ಹಿಂದಿನ ವಾಸಸ್ಥಳವು ಕರ್ನಾಟಕ ರಾಜ್ಯದಲ್ಲಿರುವ ಸ್ಥಳವಾಗಿರುತ್ತದೆ ಎನ್ನುವುದಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದ ಸಂಬಂಧಪಟ್ಟ ಕಂದಾಯ ಪ್ರಾಧಿಕಾರಿಗಳು ನೀಡಿರುವ ವಾಸದ ಪ್ರಮಾಣಪತ್ರ. ಈ ಪ್ರಮಾಣಪತ್ರ ನೀಡುವ ಪ್ರಾಧಿಕಾರಿಗಳ ಸ್ಥಳವು, ವಿದ್ಯಾರ್ಥಿ/ನಿಯ, ಆತನ/ಆಕೆಯ ತಂದೆ/ ತಾಯಿಯ ವಾಸದ ಸ್ಥಳವಾಗಿರಬೇಕು;
5) ವಿದ್ಯಾರ್ಥಿ/ನಿಯ ವ್ಯಾಸಂಗ ಪ್ರಮಾಣಪತ್ರ, ವರ್ಗಾವಣೆ ಪ್ರಮಾಣಪತ್ರ
6) ವಿದ್ಯಾರ್ಥಿ/ನಿಯ ತಂದೆ/ ತಾಯಿಯ ಮಾತೃ ಭಾಷೆಯು ಕನ್ನಡ/ ತುಳು/ ಕೊಡವ ಭಾಷೆ ಎನ್ನುವುದಕ್ಕೆ ಪೂರಕವಾಗಿ, ಅವರಲ್ಲಿ ಯಾರೊಬ್ಬರ 10ನೇ ತರಗತಿಯ ಅಂಕಪಟ್ಟಿ/ ಸಂಚಿತ ದಾಖಲೆಯ (ಕ್ಯುಮ್ಯುಲೇಟಿವ್ ರೆಕಾರ್ಡ್) ಮೂಲಪ್ರತಿ.
7) ವಿದ್ಯಾರ್ಥಿಗಳ ಮಾತೃಭಾಷೆಗೆ ಸಂಬಂಧಿಸಿದಂತೆ ಯುಕ್ತವಾಗಿ ಘೋಷಣೆ ಮಾಡಿರುವ ಘೋಷಣಾ ಪತ್ರ. (ಅಫಿಡವಿಟ್)

---

**d**

ಕನ್ನಡ, ತುಳು ಅಥವಾ ಕೊಡವ ಭಾಷೆಗಳನ್ನು ಮಾತೃಭಾಷೆಯನ್ನಾಗಿ ಹೊಂದಿರುವ ವಿದ್ಯಾರ್ಥಿ/ನಿಯು, ಕನ್ನಡ ಭಾಷೆ ಮಾತಾಡುವ ವಿವಾದಿತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೊಲ್ಲಾಪುರ ಅಥವಾ ಅಕ್ಕಲಕೋಟೆ ಅಥವಾ ಜತ್ ಅಥವಾ ಗಡಹಿಂಗ್ಲಜ ತಾಲ್ಲೂಕುಗಳಲ್ಲಿ ಅಥವಾ ಕೇರಳ ರಾಜ್ಯದ ಕಾಸರಗೋಡು ಅಥವಾ ಹೊಸದುರ್ಗ ಅಥವಾ ಮಂಜೇಶ್ವರ ತಾಲ್ಲೂಕುಗಳಲ್ಲಿ 1ರಿಂದ 12ನೇ ತರಗತಿಯವರೆಗಿನ ಅವಧಿಯಲ್ಲಿ ಕನಿಷ್ಠ ಏಳು ವರ್ಷಗಳವರೆಗೆ ವಾಸ ಮಾಡಿರಬೇಕು ಮತ್ತು ವ್ಯಾಸಂಗ ಮಾಡಿರಬೇಕು. ಆದರೆ, ಅಂಥ ವಿದ್ಯಾರ್ಥಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು.

**ಹಾಜರುಪಡಿಸಬೇಕಾದ ದಾಖಲೆಗಳು:**

1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;
2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ ಮತ್ತು ಇದರ ಜೊತೆಗೆ,–
3. ಸಂಬಂಧಪಟ್ಟ ವಿವಾದಿತ ತಾಲ್ಲೂಕಿನ ಸಂಬಂಧಪಟ್ಟ ತಹಸೀಲ್ದಾರ್‌ರವರು ನೀಡಿರುವ ವಾಸದ ಪ್ರಮಾಣಪತ್ರ;
4. ಸಂಸ್ಥೆಯ ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರು ನೀಡಿರುವ ಮತ್ತು ತಾಲ್ಲೂಕು ಶಿಕ್ಷಣ ಅಧಿಕಾರಿಯು ಮೇಲು ರುಜು ಮಾಡಿರುವ ವಿದ್ಯಾರ್ಥಿಯ ವ್ಯಾಸಂಗ ಪ್ರಮಾಣಪತ್ರ;
5. ವಿದ್ಯಾರ್ಥಿ/ನಿಯ ಮಾತೃಭಾಷೆಗೆ ಸಂಬಂಧಿಸಿದಂತೆ ಯುಕ್ತವಾಗಿ ಘೋಷಣೆ ಮಾಡಿರುವ ಘೋಷಣಾ ಪತ್ರ. (ಅಫಿಡವಿಟ್)

---

**ಸೂಚನೆ:– ಮೇಲಿನ 'c' ಮತ್ತು 'd' ಖಂಡಗಳ ಅಡಿಯಲ್ಲಿ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು ತಪ್ಪಿಲ್ಲದಂತೆ ಕನ್ನಡದಲ್ಲಿ ಮಾತನಾಡಬೇಕು, ಓದಬೇಕು ಮತ್ತು ಬರೆಯಬೇಕು ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 6–5–2016ರಂದು ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಕನಿಷ್ಠ 12 ಅಂಕಗಳನ್ನು ಪಡೆಯಬೇಕು. ಇಲ್ಲದಿದ್ದರೆ, ಅವರಿಗೆ ರ‍್ಯಾಂಕುಗಳನ್ನು ನೀಡಲಾಗುವುದಿಲ್ಲ.**

---

**e**

ವಿದ್ಯಾರ್ಥಿ/ನಿಯು, ರಕ್ಷಣಾ ಸಿಬ್ಬಂದಿಯ ಮಗ ಅಥವಾ ಮಗಳಾಗಿರುವ ಸಂದರ್ಭದಲ್ಲಿ, ಅಂಥ ವಿದ್ಯಾರ್ಥಿ/ನಿಯು ಕರ್ನಾಟಕದಲ್ಲಿ ಪಿಯುಸಿಯ ಎರಡು ವರ್ಷಗಳನ್ನು/ 11ನೇ ಮತ್ತು 12ನೇ ತರಗತಿಯನ್ನು ವ್ಯಾಸಂಗ ಮಾಡುತ್ತಿರುವಾಗ, ಆತನ/ಆಕೆಯ ಅಂಥ ರಕ್ಷಣಾ ಸಿಬ್ಬಂದಿಯಾಗಿರುವ ತಂದೆ ಅಥವಾ ತಾಯಿ ಕರ್ನಾಟಕದಲ್ಲಿ ನಿರಂತರವಾಗಿ ಕನಿಷ್ಠ ಒಂದು ವರ್ಷ ಸೇವೆ ಸಲ್ಲಿಸಿರಬೇಕು. ಅಂಥ ವಿದ್ಯಾರ್ಥಿಯು, ಕರ್ನಾಟಕ ರಾಜ್ಯದಲ್ಲಿರುವ ಯಾವುದೇ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರಬೇಕು ಮತ್ತು ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

**ಹಾಜರುಪಡಿಸಬೇಕಾದ ದಾಖಲೆಗಳು:**

1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ
2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ ಮತ್ತು ಇದರ ಜೊತೆಗೆ,–
3. ವಿದ್ಯಾರ್ಥಿ/ನಿಯು, ದ್ವಿತೀಯ ಪಿಯುಸಿ ಅಥವಾ ತತ್ಸಮಾನ ತರಗತಿಯನ್ನು ಕರ್ನಾಟಕದಲ್ಲಿ ವ್ಯಾಸಂಗ ಮಾಡಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದಕ್ಕೆ ಸಂಬಂಧಿಸಿದಂತೆ, ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು ನೀಡಿರುವ ವಿದ್ಯಾರ್ಥಿಯ ವ್ಯಾಸಂಗ ಪ್ರಮಾಣಪತ್ರ.
4. ವಿದ್ಯಾರ್ಥಿ/ನಿಯ ತಂದೆ/ ತಾಯಿ, ಕೆಲಸಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಇಂದಿನವರೆಗಿನ ಅವಧಿಯಲ್ಲಿ, ಆತ/ ಆಕೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸಿರುವುದರ ಕಾಲಾವಧಿಯನ್ನು ಸೂಚಿಸಿ ಸಂಬಂಧಪಟ್ಟ ನಿಯಂತ್ರಣಾಧಿಕಾರಿ ನೀಡಿರುವ ಉದ್ಯೋಗ ಪ್ರಮಾಣಪತ್ರ.

| | |
|---|---|
| ರಕ್ಷಣಾ ಸಿಬ್ಬಂದಿಯಾಗಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕದ ವ್ಯಕ್ತಿಯು, ಹಾಗೆ ರಕ್ಷಣಾ ಇಲಾಖೆಯ ಸೇವೆಗೆ ಸೇರುವ ಸಮಯದಲ್ಲಿ ಆತ/ ಆಕೆ, ಕರ್ನಾಟಕದಲ್ಲಿರುವ ಒಂದು ಸ್ಥಳವನ್ನು ತನ್ನ ಸ್ವಂತ ಪಟ್ಟಣ/ ಸ್ವಂತ ಊರು ಎಂದು ಘೋಷಿಸಿರುವ ಪಕ್ಷದಲ್ಲಿ, ಅಂಥ ವ್ಯಕ್ತಿಯ ಮಗನಾದ/ ಮಗಳಾದ ವಿದ್ಯಾರ್ಥಿಯು, ಅಂಥ ವಾಸಕ್ಕೆ ಸಂಬಂಧಿಸಿದ ರುಜುವಾತನ್ನು ಪಡೆದುಕೊಳ್ಳಬೇಕು ಮತ್ತು ಅದನ್ನು, ಅಧಿಕಾರಿಗಳಿಗೆ ಸಂಬಂಧಿಸಿದ ರಕ್ಷಣಾ ಮಂತ್ರಾಲಯದ ಸಂಯೋಜಿತ ಕೇಂದ್ರ ಕಾರ್ಯಸ್ಥಾನದ ಸಂಬಂಧಪಟ್ಟ ಶಾಖೆಯ ಹಾಗೂ ಜೆಸಿಓಗಳು/ ಒಆರ್‌ಗೆ ಸಂಬಂಧಿಸಿದ, ಸಂಬಂಧಪಟ್ಟ ದಾಖಲೆ ಕಚೇರಿಗಳ ಮಹಾಲೇಖಪಾಲರ ಶಾಖೆ (ಸೈನಿಕ ಕೇಂದ್ರಕಾರ್ಯಸ್ಥಾನ)ಯಿಂದ ಪಡೆದುಕೊಂಡಿರುವ ಉದ್ಧೃತ ಪ್ರತಿಯೊಂದಿಗೆ ಹಾಜರುಪಡಿಸಬೇಕು. ಅಲ್ಲದೆ ಅಂಥ ವಿದ್ಯಾರ್ಥಿಯು, ಭಾರತದಲ್ಲಿನ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯ ಅಥವಾ ಮಂಡಲಿ ಅಥವಾ ಯಾವುದೇ ಇತರ ಶಿಕ್ಷಣ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿ ಅಂಕಪಟ್ಟಿ<br>3. ಮೀಸಲಾತಿ ಪ್ರಯೋಜನಗಳನ್ನು ಕೋರುವುದಿದ್ದ ಪಕ್ಷದಲ್ಲಿ:– ಈ ಮಾಹಿತಿ ಪುಸ್ತಕದಲ್ಲಿ ನೀಡಿರುವ ನಿರ್ದಿಷ್ಟಪಡಿಸಿರುವ ನಮೂನೆಗನುಸಾರ ಸಂಬಂಧಪಟ್ಟ ತಹಸೀಲ್ದಾರ್‌ರವರು ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ; ಮತ್ತು ಇದರ ಜೊತೆಗೆ,–<br>4. ತಂದೆ/ ತಾಯಿಯು ಸೇವೆಗೆ ಸೇರುವ ಸಮಯದಲ್ಲಿ ತನ್ನ ಸ್ವಂತ ಪಟ್ಟಣ/ ಸ್ವಂತ ಊರನ್ನು ಕುರಿತು ಮಾಡಿರುವ ಘೋಷಣೆಗೆ ಸಂಬಂಧಿಸಿದಂತೆ, ಅಧಿಕಾರಿಗಳಿಗೆ ಸಂಬಂಧಿಸಿದ ರಕ್ಷಣಾಮಂತ್ರಾಲಯದ ಕೇಂದ್ರ ಕಾರ್ಯಸ್ಥಾನ ಸಂಬಂಧಪಟ್ಟ ಸಂಯೋಜಿತ ಶಾಖೆ ಮತ್ತು ಜೆಸಿಓಗಳು/ ಒಆರ್‌ಗೆ ಸಂಬಂಧಿಸಿದ, ಸಂಬಂಧಪಟ್ಟ ದಾಖಲೆ ಕಚೇರಿಗಳು ನೀಡಿರುವ ಪೋಷಕರ ಸ್ವಂತ ಪಟ್ಟಣ/ ಸ್ವಂತ ಊರಿನ ಕುರಿತ ಘೋಷಣಾ ಪ್ರಮಾಣಪತ್ರ. | **f** |
| ವಿದ್ಯಾರ್ಥಿ/ನಿಯು, ತಂದೆ/ತಾಯಿ ರಕ್ಷಣಾ ಸಿಬ್ಬಂದಿಯಾಗಿದ್ದು ಕರ್ನಾಟಕದಲ್ಲಿ ಕನಿಷ್ಠ ಒಂದು ವರ್ಷ ಸೇವೆ ಸಲ್ಲಿಸಿದ್ದು, ಆನಂತರ ಫೀಲ್ಡ್ ಅಥವಾ ಆ್ಯಕ್ಟಿವ್ ಫೀಲ್ಡ್ ಸೇವೆಗೆ ನಿಯುಕ್ತಗೊಂಡಿದ್ದ ಪಕ್ಷದಲ್ಲಿ ಮತ್ತು ಆತನ/ ಆಕೆಯ ಕುಟುಂಬವು ಕರ್ನಾಟಕದಲ್ಲಿ ವಾಸಿಸುವುದನ್ನು ಮುಂದುವರಿಸುವುದಕ್ಕೆ ರಕ್ಷಣಾ ಇಲಾಖೆಯ ಪ್ರಾಧಿಕಾರಿಗಳು ಅನುಮತಿ ನೀಡಿದ್ದಲ್ಲಿ ಆ ರಕ್ಷಣಾ ಸಿಬ್ಬಂದಿಯ ಮಗ ಅಥವಾ ಮಗಳಾಗಿರುವ ವಿದ್ಯಾರ್ಥಿ/ನಿಯು, ಕರ್ನಾಟಕದಲ್ಲಿರುವ ಯಾವುದೇ ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರಬೇಕು ಮತ್ತು ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ ಮತ್ತು ಇದರ ಜೊತೆಗೆ,–<br>3. ವಿದ್ಯಾರ್ಥಿ/ನಿಯು, ದ್ವಿತೀಯ ಪಿಯುಸಿ/ ತತ್ಸಮಾನ ತರಗತಿಯನ್ನು ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು ನೀಡಿರುವ ವ್ಯಾಸಂಗ ಪ್ರಮಾಣಪತ್ರ.<br>4. ಕರ್ನಾಟಕದಲ್ಲಿ ಯಾವ ಅವಧಿಯಲ್ಲಿ ಪೋಷಕನು/ಳು ಕಾರ್ಯ ನಿರ್ವಹಿಸಿರುತ್ತಾನೆ/ಳೆ ಎನ್ನುವುದನ್ನು ಸೂಚಿಸಿ, ನಿಯಂತ್ರಣ ಕಚೇರಿ ನೀಡಿರುವ ಸೇವಾ ಪ್ರಮಾಣಪತ್ರ ಮತ್ತು ಅಂಥ ಪೋಷಕ/ಳು, ಪ್ರಸ್ತುತ ನಿಯುಕ್ತವಾಗಿರುವ ಸ್ಥಳ ಮತ್ತು ಆತ/ ಆಕೆಯ ಕುಟುಂಬವು ಕರ್ನಾಟಕದಲ್ಲಿ ವಾಸಿಸುವುದಕ್ಕೆ ಅನುಮತಿ ನೀಡಲಾಗಿದೆ ಎನ್ನುವುದನ್ನು ಸೂಚಿಸುವ ಪ್ರಮಾಣಪತ್ರ. ಪೋಷಕನ/ಳ, ಪ್ರಸ್ತುತ ಕಾರ್ಯನಿರ್ವಹಣಾ ಸ್ಥಳವನ್ನು ಹೆಸರಿನ ಮೂಲಕ ಸೂಚಿಸಬೇಕು. ಅಂದರೆ ಅದನ್ನು ಸಂಕೇತ ಸಂಖ್ಯೆಗಳ ಮೂಲಕ ಸೂಚಿಸಬಾರದು. | **g** |
| ರಕ್ಷಣಾ ಸೇವೆಗೆ ಸೇರುವ ಸಮಯದಲ್ಲಿ, ಕರ್ನಾಟಕದಲ್ಲಿರುವ ಒಂದು ಸ್ಥಳವನ್ನು ತನ್ನ ಸ್ವಂತ ಪಟ್ಟಣ/ ಸ್ವಂತ ಊರು ಎಂದು ಘೋಷಿಸಿಕೊಂಡಿರುವಂಥ ಪ್ರಸ್ತುತ ಮಾಜಿ ಸೈನಿಕನಾ/ಳಾಗಿರುವವರ ಮಗ ಅಥವಾ ಮಗಳು, ಅಂಥ ವಾಸದ ರುಜುವಾತನ್ನು, ಆ ಜಿಲ್ಲೆಯ "ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ" ಇವರಿಂದ ಪಡೆದುಕೊಳ್ಳತಕ್ಕದ್ದು ಮತ್ತು ಅದಕ್ಕೆ "ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ" ಇವರಿಂದ ಮೇಲು ರುಜು ಮಾಡಿಸಿಕೊಂಡು ಹಾಜರುಪಡಿಸತಕ್ಕದ್ದು. ಅಲ್ಲದೆ ಅಂಥ ವಿದ್ಯಾರ್ಥಿಯು, ಭಾರತದಲ್ಲಿನ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯ ಅಥವಾ ಮಂಡಲಿ ಅಥವಾ ಯಾವುದೇ ಇತರ ಶಿಕ್ಷಣ ಸಂಸ್ಥೆಯಿಂದ ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ;<br>3. ಮೀಸಲಾತಿ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ:– ಸಂಬಂಧಪಟ್ಟ ತಹಶೀಲ್ದಾರ್‌ರವರು ಪ.ಜಾ/ ಪ.ಪಂ ದವರಿಗೆ ನಮೂನೆ–ಡಿನಲ್ಲಿ, ಪ್ರವರ್ಗ–1ಕ್ಕೆ ನಮೂನೆ–ಇ ನಲ್ಲಿ ಮತ್ತು 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗಗಳಿಗೆ ನಮೂನೆ–ಎಫ್‌ನಲ್ಲಿ ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ.<br><br>4. ಪೋಷಕ/ಳು ಸೇವೆಗೆ ಸೇರುವಾಗ ತನ್ನ ಸ್ವಂತ ಪಟ್ಟಣ/ ಸ್ವಂತ ಊರಿಗೆ ಸಂಬಂಧಿಸಿದಂತೆ ಮಾಡಿರುವ ಘೋಷಣೆಗೆ ಸಂಬಂಧಪಟ್ಟಂತೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು | **h** |

| | |
|---|---|
| ಇದರ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು ನೀಡಿ, ಅದಕ್ಕೆ ಸದರಿ ಇಲಾಖೆಯ ನಿರ್ದೇಶಕರು ಮೇಲುರುಜು ಮಾಡಿರುವ ಘೋಷಣಾ ಪ್ರಮಾಣಪತ್ರ. | |
| ಉದ್ಯೋಗದ ನಿಬಂಧನೆಗಳು ಮತ್ತು ಷರತ್ತುಗಳಿಗನುಸಾರವಾಗಿ ಭಾರತದಲ್ಲಿರುವ ಯಾವುದೇ ಸ್ಥಳಕ್ಕೆ ವರ್ಗಾವಣೆಯಾಗುವುದಕ್ಕೆ ಒಳಪಟ್ಟಿರುವ ಕೇಂದ್ರ ಸರ್ಕಾರದ ಒಬ್ಬ ಉದ್ಯೋಗಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಉದ್ಯಮ ಅಥವಾ ಜಂಟಿ ವಲಯದ ಉದ್ಯಮದ ಉದ್ಯೋಗಿಯಾಗಿರುವ ಒಬ್ಬ ಪೋಷಕನ/ಳ ಮಗ ಅಥವಾ ಮಗಳಾಗಿರುವ ಸಂದರ್ಭದಲ್ಲಿ, ಅಂಥ ಪೋಷಕ/ಳು, ವಿದ್ಯಾರ್ಥಿ/ನಿಯ ಪಿಯುಸಿ/ 11ನೇ ಮತ್ತು 12ನೇ ತರಗತಿಯ ವ್ಯಾಸಂಗದ ಎರಡು ವರ್ಷಗಳ ಅವಧಿಯಲ್ಲಿ, ಕನಿಷ್ಠ ಒಂದು ವರ್ಷದಷ್ಟು ಸೇವೆಯನ್ನು ಕರ್ನಾಟಕದಲ್ಲಿ ಸಲ್ಲಿಸಿರತಕ್ಕದ್ದು. ಅಲ್ಲದೆ ಅಂಥ ವಿದ್ಯಾರ್ಥಿ/ನಿಯು, ಕರ್ನಾಟಕದಲ್ಲಿರುವ ಯಾವುದೇ ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ಅರ್ಹತಾ ತರಗತಿಯನ್ನು ವ್ಯಾಸಂಗ ಮಾಡಿ ತೇರ್ಗಡೆಯಾಗಿರಬೇಕು.<br>**ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ ಮತ್ತು ಇದರ ಜೊತೆಗೆ,–<br>3. ವಿದ್ಯಾರ್ಥಿಯು ದ್ವಿತೀಯ ಪಿಯುಸಿ ಅಥವಾ ತತ್ಸಮಾನ ತರಗತಿಯನ್ನು ಕರ್ನಾಟಕದಲ್ಲಿ ಮಾಡಿರುತ್ತಾನೆ/ಳೆ ಎನ್ನುವುದಕ್ಕೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು ನೀಡಿರುವ ವ್ಯಾಸಂಗ ಪ್ರಮಾಣಪತ್ರ.<br>4. ಪೋಷಕ/ಳು, ಕರ್ನಾಟಕದಲ್ಲಿ ಕಾರ್ಯನಿರ್ವಹಿಸಿರುವ ಅವಧಿಯನ್ನು ಮತ್ತು ಆತ/ ಆಕೆ, ಭಾರತದಲ್ಲಿನ ಯಾವುದೇ ಪ್ರದೇಶಕ್ಕೆ ವರ್ಗಾವಣೆಯಾಗುವಂಥ ಸೇವೆಯಲ್ಲಿರುತ್ತಾನೆ/ಳೆ ಎನ್ನುವುದನ್ನು ಸಹ ಸೂಚಿಸಿ, ಉದ್ಯೋಗದಾತ ಸಂಸ್ಥೆ ನೀಡಿರುವ ಪ್ರಮಾಣಪತ್ರ.<br>5. ಪೋಷಕ/ಳು, ಕೇಂದ್ರ ಸರ್ಕಾರದ ಒಬ್ಬ ಉದ್ಯೋಗಿ ಅಥವಾ ಕೇಂದ್ರ ಅಥವಾ ಕರ್ನಾಟಕ ರಾಜ್ಯ ಸರ್ಕಾರದ ಉದ್ಯಮದ ಅಥವಾ ಜಂಟಿ ಉದ್ಯಮದ ಒಬ್ಬ ಉದ್ಯೋಗಿ ಎನ್ನುವುದನ್ನು ಸೂಚಿಸಿ, ಉದ್ಯೋಗದಾತ ಸಂಸ್ಥೆ ನೀಡಿರುವ ಪ್ರಮಾಣಪತ್ರ. | **i** |
| ಕೇಂದ್ರ ಸರ್ಕಾರದ ಉದ್ಯೋಗಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಉದ್ಯಮದ ಅಥವಾ ಜಂಟಿ ವಲಯದ ಉದ್ಯಮದ ಸೇವಾನಿರತ ಅಥವಾ ನಿವೃತ್ತ ಉದ್ಯೋಗಿಯಾಗಿರುವಂಥ ಒಬ್ಬ ಉದ್ಯೋಗಿಯು; (ಎ) ಸೇವೆಗೆ ಸೇರುವ ಸಮಯದಲ್ಲಿ ಕರ್ನಾಟಕದಲ್ಲಿರುವ ಯಾವುದೇ ಸ್ಥಳವನ್ನು ತನ್ನ ಸ್ವಂತ ಪಟ್ಟಣ/ ಸ್ವಂತ ಊರು ಎಂದು ಉದ್ಯೋಗದಾತ ಸಂಸ್ಥೆಗೆ ಘೋಷಣೆ ಮಾಡಿಕೊಂಡಿದ್ದರೆ; ಮತ್ತು (ಬಿ) ಕರ್ನಾಟಕದಲ್ಲಿರುವ ಯಾವುದೇ ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ಅಥವಾ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಠ ಏಳು ವರ್ಷಗಳ ಅವಧಿಯವರೆಗೆ ವ್ಯಾಸಂಗ ಮಾಡಿದ್ದರೆ; ಮತ್ತು ತನ್ನ ಉದ್ಯೋಗದ ಷರತ್ತುಗಳು ಹಾಗೂ ನಿಬಂಧನೆಗಳಿಗನುಸಾರವಾಗಿ ಭಾರತದಲ್ಲಿರುವ ಯಾವುದೇ ಸ್ಥಳಕ್ಕೆ ವರ್ಗಾವಣೆಯಾಗಿದ್ದರೆ ಅಥವಾ ವರ್ಗಾವಣೆಯಾಗುವಂತಿದ್ದರೆ ಅಂಥ ಉದ್ಯೋಗಿಯ ಮಗ ಅಥವಾ ಮಗಳಾಗಿರುವ ವಿದ್ಯಾರ್ಥಿಯು, ಭಾರತದಲ್ಲಿ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯ ಅಥವಾ ಮಂಡಲಿ ಅಥವಾ ಯಾವುದೇ ಇತರ ಶಿಕ್ಷಣ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ<br>3. ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ:– ಸಂಬಂಧಪಟ್ಟ ತಹಶೀಲ್ದಾರ್‌ರವರು ಪ.ಜಾ/ ಪ.ಪಂ ದವರಿಗೆ ನಮೂನೆ–ಡಿನಲ್ಲಿ, ಪ್ರವರ್ಗ–1ಕ್ಕೆ ನಮೂನೆ–ಇ ನಲ್ಲಿ ಮತ್ತು 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗಗಳಿಗೆ ನಮೂನೆ–ಎಫ್‌ನಲ್ಲಿ ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ ಹಾಗೂ ಇದರೊಂದಿಗೆ–(1) ಉದ್ಯೋಗಿಯಾದ ಪೋಷಕ/ಳು, ಕರ್ನಾಟಕದಲ್ಲಿ ಕನಿಷ್ಠ 7 ವರ್ಷಗಳವರೆಗೆ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಿಸಿದಂತೆ ಆತ/ ಆಕೆ ವ್ಯಾಸಂಗ ಮಾಡಿರುವ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ನೀಡಿರುವ ವ್ಯಾಸಂಗ ಪ್ರಮಾಣಪತ್ರ (2) ಉದ್ಯೋಗಿಯಾದ ಪೋಷಕ/ಳು, ಸೇವೆಗೆ ಸೇರುವ ಸಮಯದಲ್ಲಿ ನೀಡಿರುವ ಸ್ವಗ್ರಾಮದ ಮಾಹಿತಿಗೆ ಸಂಬಂಧಿಸಿದಂತೆ ಹಾಗೂ ಆತ/ ಆಕೆಯು ಭಾರತದಲ್ಲಿರುವ ಯಾವುದೇ ಸ್ಥಳಕ್ಕೆ ವರ್ಗಾವಣೆಯಾಗುವ ಸೇವೆಗೆ ಸಂಬಂಧಿಸಿರುತ್ತಾರೆ ಎನ್ನುವುದನ್ನು ಸೂಚಿಸಿ ಉದ್ಯೋಗದಾತ ಸಂಸ್ಥೆ ನೀಡಿರುವ ಸ್ವಂತ ಪಟ್ಟಣ/ ಸ್ವಂತ ಊರಿನ ಘೋಷಣಾ ಪತ್ರ. | **j** |
| ಕರ್ನಾಟಕದಿಂದ ಸಂಸತ್ತಿಗೆ ಚುನಾಯಿತರಾದ ಸದಸ್ಯರ ಮಗ ಅಥವಾ ಮಗಳಾಗಿದ್ದಲ್ಲಿ ಅಂಥ ವಿದ್ಯಾರ್ಥಿ/ನಿಯು, ಭಾರತದಲ್ಲಿ ಎಲ್ಲೇ ಇರುವ ವಿಶ್ವವಿದ್ಯಾಲಯ ಅಥವಾ ಮಂಡಳಿ ಅಥವಾ ಯಾವುದೇ ಇತರ ಶಿಕ್ಷಣ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. | **k** |

| | |
|---|---|
| **ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್ಎಸ್ಎಲ್ಸಿ / 10ನೇ ತರಗತಿಯ ಅಂಕಪಟ್ಟಿ:<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ<br>3. ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ:- ಸಂಬಂಧಪಟ್ಟ ತಹಶೀಲ್ದಾರ್‌ರವರು ಪ.ಜಾ/ ಪ.ಪಂ ದವರಿಗೆ ನಮೂನೆ-ಡಿನಲ್ಲಿ, ಪ್ರವರ್ಗ-1ಕ್ಕೆ ನಮೂನೆ-ಇ ನಲ್ಲಿ ಮತ್ತು 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗಗಳಿಗೆ ನಮೂನೆ-ಎಫ್‌ನಲ್ಲಿ ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ<br>4) ಪೋಷಕ/ಳು, ಕರ್ನಾಟಕದಿಂದ ಚುನಾಯಿತನಾಗಿದ್ದ/ಳಾಗಿದ್ದ ಅಥವಾ ಚುನಾಯಿತನಾಗಿರುವ/ಳಾಗಿರುವ ಸಂಸತ್ ಸದಸ್ಯನಾಗಿರುತ್ತಾನೆ/ಳೆ ಎನ್ನುವುದನ್ನು ತೋರಿಸುವ ಸಂಸತ್ತಿನ ಕಾರ್ಯದರ್ಶಿಯವರು ನೀಡಿರುವ ಪ್ರಮಾಣಪತ್ರ. | |
| ಕರ್ನಾಟಕ ರಾಜ್ಯದ ಹೊರಗಡೆ ಸೇವೆ ಸಲ್ಲಿಸಿ ನಿವೃತ್ತರಾದ ಅಥವಾ ಸೇವೆ ಸಲ್ಲಿಸುತ್ತಿರುವ: (ಎ) ಕರ್ನಾಟಕ ಕೇಡರ್‌ನ ಅಖಿಲ ಭಾರತ ಸೇವೆಗೆ ಸೇರಿದ; ಮತ್ತು (ಬಿ) ಕರ್ನಾಟಕ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯ ಮಗ ಅಥವಾ ಮಗಳಾಗಿದ್ದಲ್ಲಿ ಅಂಥ ವಿದ್ಯಾರ್ಥಿ/ನಿಯು, ರಾಜ್ಯದ ಹೊರಗೆ 1ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಅಥವಾ 12ನೇ ತರಗತಿಯ ಪರೀಕ್ಷೆಯವರೆಗೆ ವ್ಯಾಸಂಗ ಮಾಡಿರುವ ಸಂವಾದಿ ಅವಧಿಯನ್ನು ಮೇಲಿನ ಅರ್ಹತಾ ಖಂಡ (ಎ)ನಲ್ಲಿ ಅಗತ್ಯಪಡಿಸಿರುವಂತೆ ಕರ್ನಾಟಕದೊಳಗೆ ಏಳು ವರ್ಷಗಳಷ್ಟು ವ್ಯಾಸಂಗ ಮಾಡಬೇಕಿರುವ ಅವಧಿಯನ್ನು ಸರಿದೂಗಿಸಿಕೊಳ್ಳುವುದಕ್ಕಾಗಿ ಸೇರಿಸಿಕೊಳ್ಳಬಹುದಾಗಿದೆ. | **l** |
| **ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್ಎಸ್ಎಲ್ಸಿ / 10ನೇ ತರಗತಿಯ ಅಂಕಪಟ್ಟಿ:<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ<br>3. ಮೀಸಲಾತಿ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ:- ಸಂಬಂಧಪಟ್ಟ ತಹಶೀಲ್ದಾರ್‌ರವರು ಪ.ಜಾ/ ಪ.ಪಂ ದವರಿಗೆ ನಮೂನೆ-ಡಿನಲ್ಲಿ, ಪ್ರವರ್ಗ-1ಕ್ಕೆ ನಮೂನೆ-ಇ ನಲ್ಲಿ ಮತ್ತು 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗಗಳಿಗೆ ನಮೂನೆ-ಎಫ್‌ನಲ್ಲಿ ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ ಮತ್ತು –<br>4) ಪೋಷಕ/ಳು, ಕರ್ನಾಟಕ ಕೇಡರ್‌ನ ಅಖಿಲ ಭಾರತೀಯ ಸೇವೆಗೆ ಸೇರಿದವರಾಗಿರುವ ಸಂದರ್ಭದಲ್ಲಿ, ಪೋಷಕ/ಳು ಅಂಥ ಅಖಿಲ ಭಾರತೀಯ ಕೇಡರ್‌ನ ಸದಸ್ಯರಾಗಿರುತ್ತಾರೆ ಎನ್ನುವುದಕ್ಕೆ ಸಂಬಂಧಿಸಿದಂತೆ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ, ಸಿಆಸುಇ, ಕರ್ನಾಟಕ ಸರ್ಕಾರ, ಬೆಂಗಳೂರು ಅವರು ನೀಡಿರುವ ಪ್ರಮಾಣಪತ್ರ, ಅಂತಹ ಪತ್ರದಲ್ಲಿ, ಆತ/ ಆಕೆ ಕರ್ನಾಟಕ ರಾಜ್ಯದಿಂದ ಹೊರಗೆ ಸೇವೆ ಸಲ್ಲಿಸಿದ/ ಸಲ್ಲಿಸುತ್ತಿರುವ ಅವಧಿಯನ್ನು ಸಹ ತಿಳಿಸತಕ್ಕದ್ದು ಮತ್ತು ಪೋಷಕ/ಳು, ಕರ್ನಾಟಕ ಸರ್ಕಾರದ ಉದ್ಯೋಗಿಯಾಗಿರುವ ಪಕ್ಷದಲ್ಲಿ, ಅಂಥ ಪೋಷಕ/ಳು ಎಲ್ಲಿ ಸೇವೆ ಸಲ್ಲಿಸುತ್ತಿರುವರೋ ಆ ಇಲಾಖೆಯ ಮುಖ್ಯಸ್ಥರಿಂದ ಅಥವಾ ಕೇಂದ್ರ ಕಚೇರಿಯಿಂದ ಪಡೆದಿರುವ ಪ್ರಮಾಣಪತ್ರವನ್ನು ಇದಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಬೇಕಿರುತ್ತದೆ. | |
| ಜಮ್ಮು ಮತ್ತು ಕಾಶ್ಮೀರದಿಂದ ವಲಸೆ ಬಂದಿರುವ ವ್ಯಕ್ತಿಗಳ ಮಗನಾಗಿರುವ ಅಥವಾ ಮಗಳಾಗಿರುವ ವಿದ್ಯಾರ್ಥಿಯು, ಹಾಗೆ ವಲಸೆ ಬಂದಿರುವುದರ ರುಜುವಾತನ್ನು (ಗುರುತಿನ ಚೀಟಿಯನ್ನು), ಭಾರತದ ಯಾವುದೇ ರಾಜ್ಯದ ಅಧಿಕಾರವ್ಯಾಪ್ತಿಯ "ಜಿಲ್ಲಾ ದಂಡಾಧಿಕಾರಿ ಮತ್ತು ಜಿಲ್ಲಾಧಿಕಾರಿ"ಯವರಿಂದ ಪಡೆದುಕೊಂಡಿರತಕ್ಕದ್ದು ಮತ್ತು ಅದನ್ನು ಹಾಜರುಪಡಿಸತಕ್ಕದ್ದು. | **m** |
| **ಹಾಜರುಪಡಿಸಬೇಕಾದ ದಾಖಲೆಗಳು:**<br>1. ವಿದ್ಯಾರ್ಥಿ/ನಿಯ ಎಸ್ಎಸ್ಎಲ್ಸಿ / 10ನೇ ತರಗತಿಯ ಅಂಕಪಟ್ಟಿ:<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ ಮತ್ತು ಇದರ ಜೊತೆಗೆ, –<br>3. ವಲಸೆಯ ರುಜುವಾತಾಗಿ ಅಧಿಕಾರವ್ಯಾಪ್ತಿಯ ಜಿಲ್ಲಾ ದಂಡಾಧಿಕಾರಿ ಮತ್ತು ಜಿಲ್ಲಾಧಿಕಾರಿಯವರು ನೀಡಿರುವ ಮೂಲ ಪ್ರಮಾಣಪತ್ರ (ಗುರುತಿನ ಚೀಟಿ). **ಖಂಡ 'ಟ' ಮೇರೆಗೆ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು, ಸರ್ಕಾರ ಮೀಸಲಿರಿಸಿದ ಅಂಥ ಸೀಟುಗಳಿಗೆ ಮಾತ್ರ ಅರ್ಹರಾಗಿರುತ್ತಾರೆ.** | |
| ಕರ್ನಾಟಕ ರಾಜ್ಯದಿಂದ ಹೊರಗೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಹತ್ತು ಪೂರ್ಣಾವಧಿ ಶೈಕ್ಷಣಿಕ ವರ್ಷಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು, ಕ.ಪ.ಪ್ರಾ ನಡೆಸುವ ಕನ್ನಡ ಭಾಷಾ ಪರೀಕ್ಷೆ ತೆಗೆದುಕೊಳ್ಳಬೇಕಾದ ಅಗತ್ಯ ಇರುವುದಿಲ್ಲ. ಆದರೆ, ಅಂಥ ವಿದ್ಯಾರ್ಥಿಗಳು ಕಡ್ಡಾಯವಾಗಿ, ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆ ನಡೆಸುವ ಅರ್ಹತಾ ತರಗತಿಯನ್ನು ವ್ಯಾಸಂಗ ಮಾಡಿ ತೇರ್ಗಡೆಯಾಗಿರಬೇಕು. | **n** |

<table>
<tr><td>ಹಾಜರುಪಡಿಸಬೇಕಾದ ದಾಖಲೆಗಳು:<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ ಮತ್ತು ಇದರೊಂದಿಗೆ,–<br>3. ವಿದ್ಯಾರ್ಥಿಯ ಮತ್ತು ಆತನ/ ಆಕೆಯ ತಂದೆ/ ತಾಯಿ, --------2016ರಂದು ಕರ್ನಾಟಕ ರಾಜ್ಯದ ಹೊರಗಡೆ ವಾಸಿಸುತ್ತಿದ್ದಾರೆ ಎಂದು ಪ್ರಮಾಣೀಕರಿಸಿ ಸಂಬಂಧಪಟ್ಟ ಕಂದಾಯ/ ಪೌರಸಭಾ ಪ್ರಾಧಿಕಾರಿಗಳು ನೀಡಿರುವ ವಾಸದ ಪ್ರಮಾಣಪತ್ರ. ಪ್ರಮಾಣಪತ್ರ ನೀಡುವ ಪ್ರಾಧಿಕಾರಿಯ ಸ್ಥಳವು ವಿದ್ಯಾರ್ಥಿ/ನಿಯ ತಂದೆ/ತಾಯಿಯ ವಾಸದ ಸ್ಥಳಕ್ಕೆ ಸಂಬಂಧಿಸಿದ್ದಾಗಿರಬೇಕು.<br>4. ವಿದ್ಯಾರ್ಥಿಯು, 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾನೆ/ಳೆ ಎಂದು ಪ್ರಮಾಣೀಕರಿಸಿ ಶಿಕ್ಷಣ ಸಂಸ್ಥೆಯ ಮುಖ್ಯೋಪಾಧ್ಯಾಯರು ನೀಡಿರುವ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣಪತ್ರ</td><td></td></tr>
<tr><td>ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸೇವೆಯ ಸೇವಾನಿರತ ಅಥವಾ ನಿವೃತ್ತ ಉದ್ಯೋಗಿಯ ಮಗನಾಗಿರುವ/ ಮಗಳಾಗಿರುವ ವಿದ್ಯಾರ್ಥಿ/ನಿಯು, ಅಂಥ ವಾಸಕ್ಕೆ ಸಂಬಂಧಿಸಿದ ರುಜುವಾತನ್ನು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ ಸೇವೆಗೆ ಸೇರುವ ಸಮಯದಲ್ಲಿ ತನ್ನ ಸ್ವಂತ ಪಟ್ಟಣ/ ಸ್ವಂತ ಊರು ಕರ್ನಾಟಕ ರಾಜ್ಯದಲ್ಲಿರುವ ಒಂದು ಸ್ಥಳವಾಗಿದೆ ಎಂದು ಘೋಷಿಸಿಕೊಂಡಿರುವ ತನ್ನ ಪೋಷಕನ/ಳ ಸೇವಾ ದಾಖಲೆಯನ್ನು ನಿರ್ವಹಿಸುತ್ತಿರುವ ಸಿ.ಎ.ಪಿ.ಎಫ್.ಯ ದಾಖಲೆ ಕಚೇರಿಯಿಂದ ಉದ್ಧೃತ ಪ್ರತಿಯನ್ನು ಪಡೆದುಕೊಳ್ಳುವ ಮೂಲಕ ಹಾಜರುಪಡಿಸಬೇಕು. ಅಲ್ಲದೆ ಅಂತಹ ವಿದ್ಯಾರ್ಥಿ/ನಿಯು, ಭಾರತದಲ್ಲಿ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯ ಅಥವಾ ಮಂಡಲಿ ಯಾವುದೇ ಇತರ ಶಿಕ್ಷಣ ಸಂಸ್ಥೆ ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.</td><td rowspan="2">o</td></tr>
<tr><td>ಹಾಜರುಪಡಿಸಬೇಕಾದ ದಾಖಲೆಗಳು:<br>1. ವಿದ್ಯಾರ್ಥಿ/ನಿಯ ಎಸ್‌ಎಸ್‌ಎಲ್‌ಸಿ / 10ನೇ ತರಗತಿಯ ಅಂಕಪಟ್ಟಿ;<br>2. ದ್ವಿತೀಯ ಪಿಯುಸಿ/ 12ನೇ ತರಗತಿಯ ಅಂಕಪಟ್ಟಿ;<br>3. ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ:– ಈ ಮಾಹಿತಿ ಪುಸ್ತಕದಲ್ಲಿ ನೀಡಿರುವ ನಿರ್ದಿಷ್ಟಪಡಿಸಿರುವ ನಮೂನೆಗನುಸಾರವಾಗಿ ಸಂಬಂಧಪಟ್ಟ ತಹಶೀಲ್ದಾರರು ನೀಡಿರುವ ಜಾತಿ/ ಜಾತಿ ಮತ್ತು ಆದಾಯ ಪ್ರಮಾಣಪತ್ರ<br>4. ತನ್ನ ಸ್ವಂತ ಪಟ್ಟಣ/ ಸ್ವಂತ ಊರಿಗೆ ಸಂಬಂಧಿಸಿದಂತೆ ಪೋಷಕ/ಳು, ಸೇವೆಗೆ ಸೇರುವ ಸಮಯದಲ್ಲಿ ಘೋಷಣೆ ಮಾಡಿರುವಂತೆ, ಪೋಷಕನ/ಳ ಸೇವಾ ದಾಖಲೆಗಳನ್ನು ನಿರ್ವಹಿಸುತ್ತಿರುವ ಸಿ.ಎ.ಪಿ.ಎಫ್.ನ ದಾಖಲೆ ಕಚೇರಿ ನೀಡಿರುವ ಪ್ರಮಾಣಪತ್ರ.</td></tr>
</table>

**ಸೂಚನೆ:** ಕೋರಿರುವ ಖಂಡಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿ/ನಿ ಹಾಜರುಪಡಿಸಿರುವ ಯಾವುದೇ ದಾಖಲೆಗಳು ಸುಳ್ಳು/ ತಪ್ಪು/ ತಿದ್ದಿರುವುದು/ ನಕಲಿ ಎಂದು ಕಂಡುಬಂದ ಪಕ್ಷದಲ್ಲಿ, ಅಂಥ ವಿದ್ಯಾರ್ಥಿ/ನಿಗೆ ಹಂಚಿಕೆ ಮಾಡಿರುವ ಸೀಟನ್ನು ಯಾವುದೇ ಸಮಯದಲ್ಲಿ ರದ್ದುಪಡಿಸಲಾಗುವುದು ಮತ್ತು ಅಂಥ ವಿದ್ಯಾರ್ಥಿ ಕಟ್ಟಿರುವ ಶುಲ್ಕದ ಇಡೀ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.